3	ಆನೆಕೆರೆ ಕೋಡಿ ದುರಸ್ತಿ ಕಾಮಗಾರಿ ಡಿ.ಇ.ಆರ್.ಸಂ:172:94-95 ದಿ: 23.5.95	2.00	2.34	ಏಪ್ರಾನ್‌ಗಳ ನಿರ್ಮಾಣ ಮತ್ತು ಸ್ಲೂಯಿಸ್ ದುರಸ್ತಿ ಕಾಮಗಾರಿಯನ್ನು ಮಾಡಲಾಗಿದೆ.
4	ಆನೆಕೆರೆ ಹೂಳೆತ್ತುವ ಕಾಮಗಾರಿ (ರೈತರ ಸಹಯೋಗದೊಂದಿಗೆ) ಸಿ.ಆರ್.ಸಂ:63:98-99 ದಿ: 22-10-98.	5.70	6.04	51,336 ಘನ ಮೀಟರ್ ಹೂಳನ್ನು ತೆಗೆಯಲಾಗಿದೆ.

ಔರಾದ್ ನಗರಕ್ಕೆ ಬಸ್ ನಿಲ್ದಾಣ ನಿರ್ಮಾಣ

1583 (1884) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ನಗರದಲ್ಲಿ ಬಸ್ ಡಿಪೋ ನಿರ್ಮಾಣ ಮಾಡಲು ಸರ್ಕಾರ ಮಂಜೂರಾತಿ ನೀಡಿದೆಯೇ.

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಿತ್ತು.

ಇ) ಈ ಕಾಮಗಾರಿಗಾಗಿ ಬಿಡುಗಡೆಯಾಗಿರುವ ಹಣವೆಷ್ಟು; ಯಾವ ಯಾವ ಮೂಲದಿಂದ ಬಂದಿದೆ; ಬಸ್ ಡಿಪೋಕ್ಕೆ ಬೇಕಾದಂತಹ ಭೂಮಿ ಸಿದ್ದವಾಗಿದೆಯೇ;

ಈ) ಹಾಗಿದ್ದಲ್ಲಿ ಇದುವರೆಗೆ ಏಕೆ ಕಾಮಗಾರಿ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ. (ನೆನೆಗುದಿಗೆ ಬಿಳಲು) ಇದಕ್ಕೆ ಕಾರಣವೇನು;

ಉ) ಈಗಾಗಲೇ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ ನಿಗದಿಪಡಿಸಿ ಮುಂದೂಡಿರುವ ಸಂಗತಿ ನಿಜವೇ; ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು; ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ರಮಾನಾಥ ರೈ ಬಿ (ಸಾರಿಗೆ ಸಚಿವರು) :

ಅ) ನೀಡಿದೆ.

ಆ) ದಿನಾಂಕ 27.11.2001 ರಂದು

ಇ) ಈ ಕಾಮಗಾರಿಗಾಗಿ ಒಟ್ಟು 100-00 ಲಕ್ಷ ರೂ.ಗಳ ವೆಚ್ಚ ತಗುಲಲಿದೆ. ಇದರ ಪೈಕಿ 50-00 ಲಕ್ಷ ರೂ.ಗಳನ್ನು ಔರಾದ್ ಶಾಸಕರ ಅನುದಾನದಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಉಳಿದ 50-00 ಲಕ್ಷ ರೂ.ಗಳನ್ನು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ವೆಚ್ಚ ಮಾಡಲಿದೆ.

ಘಟಕಕ್ಕೆ ಬೇಕಾದ 6 ಎಕರೆ 32 ಗುಂಟೆ ನಿವೇಶನವು ಸಂಸ್ಥೆಯ ವಶದಲ್ಲಿರುತ್ತದೆ.

ಈ) ಈ ಕಾಮಗಾರಿಯನ್ನು ದಿನಾಂಕ 28.6.2002 ರಂದು ಪ್ರಾರಂಭಿಸಲಾಗಿದೆ.

ಉ) ಇಲ್ಲ.

ಈ ಕಾಮಗಾರಿಗಾಗಿ ಅಡಿಗಲ್ಲು ಸಮಾರಂಭವನ್ನು ಅಂದಿನ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯ್ಲಿರವರು ನೆರವೇರಿಸುತ್ತಾರೆ. ಕಾಮಗಾರಿಯನ್ನು

ದಿನಾಂಕ:28.6.2002 ರಂದು ಪ್ರಾರಂಭಿಸಲಾಗಿದೆ. ಡಿಸೆಂಬರ್ 2003ರ ಒಳಗಾಗಿ ಪೂರ್ಣಗೊಳಿಸಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಕ್ರಮ ಕಟ್ಟಡಗಳು

1585(1362) ಶ್ರೀ ಗುರುಸ್ವಾಮಿ ಎಸ್ (ಚಾಮುಂಡೇಶ್ವರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಸ್ತಿಯಲ್ಲಿ 2001-2002ನೇ ಸಾಲಿನಲ್ಲಿ ನಿರ್ಮಾಣ ಮಾಡಲಾಗಿರುವ ಅಕ್ರಮ ಕಟ್ಟಡಗಳು ಎಷ್ಟು; ಅವು ಯಾವುವು;

ಆ) ಈ ಆಸ್ತಿಯನ್ನು ಮರಳಿ ವಶಕ್ಕೆ ಪಡೆಯಲು ಕೈಗೊಂಡಿರುವ ಕ್ರಮವೇನು;

ಇ) ಧ್ವಂಸ ಮಾಡಲಾಗಿರುವ ಕಟ್ಟಡಗಳೆಷ್ಟು ಮತ್ತು ಈ ರೀತಿ ಮರುಕಳಿಸಿದಂತೆ ಕೈಗೊಂಡಿರುವ ಕ್ರಮಗಳೇನು?

ಈ) ಈ ನಗರ ಯೋಜನಾ ಪ್ರಾಧಿಕಾರದ ಅನುಮತಿ ಪಡೆಯದೇ ನಿರ್ಮಾಣ ಗೊಂಡಿರುವ ಕಟ್ಟಡಗಳು ಯಾವುವು, ಅದನ್ನು ಸಕ್ರಮಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಉ) ಸಕ್ರಮಾತಿಯಲ್ಲಿ ವಸೂಲು ಮಾಡಲಾದ ದಂಡ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ 2001-2002ನೇ ಸಾಲಿನಲ್ಲಿ ಯಾವುದೇ ಅಕ್ರಮ ಕಟ್ಟಡಗಳು ನಿರ್ಮಾಣವಾಗಿರುವುದು ಈ ಪ್ರಾಧಿಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಕಳೆದ 21/2 ವರ್ಷಗಳ ಅವಧಿಯಲ್ಲಿ 732 ಅಕ್ರಮ ಕಟ್ಟಡಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನೆಲಸಮ ಮಾಡಲಾಗಿದೆ. ಈ ಕಟ್ಟಡಗಳು ಕಳೆದ 3 ವರ್ಷಗಳ ಮೇಲ್ಪಟ್ಟು ಕಟ್ಟಲ್ಪಟ್ಟಿರುತ್ತವೆ. ಹಾಗೂ ನೆಲಸಮ ಮಾಡುವ ಪ್ರಕ್ರಿಯೇ ಅನಧಿಕೃತ ಕಟ್ಟಡಗಳ ನಿರ್ಮಾಣಗಳನ್ನು ತಡೆಯುವ ಕ್ರಮವಾಗಿದೆ. ಇದರ ಜೊತೆಗೆ ಭೂಗಳ್ಳರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ವಿಭಾಗವು ಯಾವುದೇ ಕಟ್ಟಡಗಳ ನಕ್ಷೆಯನ್ನು ಮಂಜೂರು ಮಾಡುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಮೈಸೂರು ನಗರ ಪಾಲಿಕೆ ಕಾರ್ಯನಿರ್ವಹಣೆ

1586 (1863) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಪಾಲಿಕೆಯಲ್ಲಿ 11-10-1999 ರಿಂದ ತಹಲ್‌ವರೆಗೆ ಎಷ್ಟು ಜನ ಅಧಿಕಾರಿಗಳು ಯಾವ ಯಾವ ಅವಧಿಯಿಂದ ಕೆಲಸ ಮಾಡುತ್ತಿದ್ದಾರೆ; ಅವರಲ್ಲಿ ಪ್ರತಿನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವವರು ಯಾರು?

ಆ) ಕೆಲವು ಆರೋಗ್ಯ ಅಧಿಕಾರಿ ಇನ್ಸ್‌ಪೆಕ್ಟರ್‌ಗಳ ಮೇಲೆ ದೂರುಗಳು ಬಂದಿದ್ದರೂ